ಕ್ಯಾಪಿಟೇಶನ್ ಶುಲ್ಕ ರದ್ದು ಮಾಡುವ ಬಗ್ಗೆ

128. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ) ರಾಜ್ಯದಲ್ಲಿ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ಸಂಖ್ಯೆ ಎಷ್ಟು ;

ಆ) ಈ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸೀಟು ದೊರಕಲು ಕ್ಯಾಪಿಟೇಶನ್ ಕೊಡಬೇಕಾಗಿರುವುದು ಸರ್ಕಾರದವರಿಗೆ ಗೊತ್ತಿದೆಯೇ ;

ಇ) ಕ್ಯಾಪಿಟೇಶನ್ ಶುಲ್ಕವನ್ನು ರದ್ದು ಮಾಡಬೇಕೆಂದು ರಾಜ್ಯದ ವಿದ್ಯಾರ್ಥಿಗಳು, ಪೋಷಕರು, ಮತ್ತು ಜನತೆ ಒತ್ತಾಯ ಮಾಡುತ್ತಿರುವುದು ಸರ್ಕಾರದವರಿಗೆ ತಿಳಿದಿದೆಯೇ ;

ಈ) ಈ ಕ್ಯಾಪಿಟೇಶನ್ ಶುಲ್ಕವನ್ನು ರದ್ದು ಮಾಡಲು ಸರ್ಕಾರದವರು ನಿರ್ಧರಿಸಿದ್ದಾರೆಯೇ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು)— ಅ) 28

ಆ) ಗೊತ್ತಿದೆ.

ಇ) ತಿಳಿದಿದೆ.

ಈ) ಹಂತ ಹಂತವಾಗಿ ಐದು ವರ್ಷದಲ್ಲಿ ರದ್ದು ಮಾಡಲು ಉದ್ದೇಶಿಸಿದೆ.

ಶ್ರೀ ಎಂ. ಎಸ್. ಕೃಷ್ಣನ್—ಸ್ವಾಮಿ, ಇಂಜಿನಿಯರಿಂಗ್ ಕಾಲೇಜು ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಶುಲ್ಕ ವಸೂಲು ಮಾಡುತ್ತಿದ್ದಾರೆ. ಆದರೆ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಯಾವ ಯಾವ ಕಾಲೇಜುಗಳಲ್ಲಿ ಎಷ್ಟೆಷ್ಟು ಕ್ಯಾಪಿಟೇಶನ್ ಶುಲ್ಕ ವಸೂಲು ಮಾಡುತ್ತಿದ್ದಾರೆ ಎಂಬುದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಬಿ. ರಾಚಯ್ಯ.—ಖಾಸಗಿ ಇಂಜಿನಿಯರಿಂಗ್ ಕಾಲೇಜಿನವರು ಎಷ್ಟು ವಸೂಲು ಮಾಡುತ್ತಿದ್ದಾರೆ ಎಂಬುದು ಸರ್ಕಾರಕ್ಕೆ ಗೊತ್ತಿಲ್ಲ.

ಶ್ರೀ. ಎಂ. ಎಸ್. ಕೃಷ್ಣನ್.—ಎಷ್ಟೆಷ್ಟು ವಸೂಲು ಮಾಡುತ್ತಿದ್ದಾರೆಂಬುದು ಗೊತ್ತಿಲ್ಲವೇ ? ಮತ್ತೆ ಗೊತ್ತಿದೆ ಎಂದು ಹೇಳಿದಿರಿ.

ಶ್ರೀ ಬಿ. ರಾಚಯ್ಯ.—ವಸೂಲು ಮಾಡುತ್ತಿದ್ದಾರೆ ಎಂಬುದು ಗೊತ್ತಿದೆ. ಆದರೆ ಎಷ್ಟೆಷ್ಟು ವಸೂಲು ಮಾಡುತ್ತಿದ್ದಾರೆ ಎಂಬುದು ಗೊತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇಷ್ಟಿಷ್ಟು ಕ್ಯಾಪಿಟೇಷನ್ ಶುಲ್ಕ ವಸೂಲು ಮಾಡಬಹುದು, ಇದಕ್ಕಿಂತ ಜಾಸ್ತಿ ವಸೂಲು ಮಾಡಬಾರದು ಎಂಬ ಆಜ್ಞೆಯನ್ನು ಸರ್ಕಾರದವರು ಹೊರಡಿಸಿದ್ದಾರಾ ಸ್ವಾಮಿ ?

ಶ್ರೀ ಬಿ. ರಾಚಯ್ಯ.—ಏಡೆಡ್ ಕಾಲೇಜುಗಳಿಗೆ ಹೇಳಿದೆ. ಆದರೆ ಖಾಸಗಿಯವರಿಗೆ ಮಾತ್ರ ಇಷ್ಟು ಎಂದು ಗೊತ್ತು ಮಾಡಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಖಾಸಗಿ ಕಾಲೇಜುಗಳಲ್ಲಿ ಎಷ್ಟು ಕ್ಯಾಪಿಟೇಷನ್ ಶುಲ್ಕ ವಸೂಲು ಮಾಡುತ್ತಿದ್ದಾರೆ ಎಂಬುದು ಗೊತ್ತಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಆರ್ಥ ಎಷ್ಟಾದರೂ ವಸೂಲು ಮಾಡಿಕೊಳ್ಳಬಹುದು ಎಂದಾಗುತ್ತದೆ. ಈ ಕ್ಯಾಪಿಟೇಷನ್ ಶುಲ್ಕದ ಸಮಸ್ಯೆ ದೊಡ್ಡ ಹಾವಳಿಯಾಗಿದೆ. ಇದನ್ನು ತಡೆಗಟ್ಟದಿದ್ದರೆ ನಾಳೆ ಪರಿಸ್ಥಿತಿ ಏನಾಗುತ್ತದೆ ?

ಉಪಾಧ್ಯಕ್ಷರು.—ಪ್ರಶ್ನೆ ಏನು ಎಂಬುದನ್ನು ಕೇಳಿ.

ಶ್ರೀ ಎಸ್. ಬಂಗಾರಪ್ಪ.—ಪ್ರಶ್ನೆಯನ್ನೇ ಕೇಳುತ್ತಿದ್ದೇನೆ. ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲವೆ ? ಬಂದಿದ್ದರೆ ಯಾವ ಕಾರ್ಯಕ್ರಮವನ್ನು ಸರ್ಕಾರದವರು ಹಾಕಿಕೊಂಡಿದ್ದೀರಿ ?

ಶ್ರೀ ಬಿ. ರಾಚಯ್ಯ:—1981ರಲ್ಲಿಯೇ ಕ್ಯಾಪಿಟೇಷನ್ ಶುಲ್ಕವನ್ನು ಮುಂದಿನ 5 ವರ್ಷಗಳೊಳಗಾಗಿ ಹಂತಹಂತವಾಗಿ ರದ್ದುಪಡಿಸಬೇಕೆಂದು ಸರ್ಕಾರಿ ಆಜ್ಞೆ ಹೊರಟಿದೆ. ಆ ಆಜ್ಞೆ ಇವತ್ತು ಉಚ್ಚ ನ್ಯಾಯಾಲಯದಲ್ಲಿ ತಡೆಯಾಗಿ ನಿಂತಿದೆ. 1981 ರಲ್ಲಿ ಸರ್ಕಾರಿ ಆಜ್ಞೆ ಹಕುವ್ ಆಗಿದೆ. ಇದು ಎಕ್ಸ್ ಕ್ಯೂಟಿವ್ ಆರ್ಡರ್ ಇದೆ. ಆ ಒಂದು ಅಧಿಕಾರ ಬಲದಿಂದ ಅದನ್ನು ಸರಿಪಡಿಸಬೇಕೆಂದೂ ಮತ್ತು ಮುಂದಿನ 5 ವರ್ಷಗಳಲ್ಲಿ ಕ್ಯಾಪಿಟೇಷನ್ ಶುಲ್ಕವನ್ನು ಹಂತ ಹಂತವಾಗಿ ನಿಲ್ಲಿಸಬೇಕೆಂಬುದೇ ಸರ್ಕಾರದ ಉದ್ದೇಶ.

ಶ್ರೀ ಎಂ. ಎಸ್. ಕೃಷ್ಣನ್:—ತಾವು ಇದನ್ನು 5 ವರ್ಷಗಳಲ್ಲಿ ತೆಗೆಯಬೇಕೆಂದು ಹೇಳುತ್ತಿದ್ದೀರಿ. ತಮಗೆ ಗೊತ್ತಿರುವ ಹಾಗೆ ಈ ಕ್ಯಾಪಿಟೇಷನ್ ಶುಲ್ಕ ಬೇರೆ ರಾಜ್ಯಗಳಲ್ಲಿ ಇಲ್ಲ. ಪಕ್ಕದ ಆಂಧ್ರ ಪ್ರದೇಶದಲ್ಲಿ ಮಾನ್ಯ ಎನ್. ಟಿ. ರಾಮರಾವ್‌ರವರು ಒಂದು ಆರ್ಡಿನೆನ್ಸ್ ಮೂಲಕ ಈ ಶುಲ್ಕವನ್ನು ತೆಗೆಯುವ ಬಗೆ ಕಾರ್ಯಕ್ರಮ ಹಾಕಿಕೊಂಡರು. ಈ ರೀತಿ ತಾವೂ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ :—ನಮ್ಮಲ್ಲಿ 28 ಖಾಸಗೀ ಕಾಲೇಜುಗಳು ಇವೆ. ಇವುಗಳಲ್ಲಿ ಕೆಲವು ಸರ್ಕಾರದಿಂದ ಸಹಾಯ ಪಡೆಯುತ್ತಿರುವಂಥವುಗಳು. ಹೀಗೆ ನಮ್ಮಲ್ಲಿ ಇರುವ 44 ಖಾಸಗೀ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡುವ ಅಥವಾ ಸರ್ಕಾರವೇ ವಹಿಸಿಕೊಳ್ಳುವುದಕ್ಕೆ ಹೊರಟರೆ ಆ ಮೂಲಕ ಇವುಗಳನ್ನು ನಡೆಸಲು ಸರ್ಕಾರಕ್ಕೆ ನೂರೆಂಟು ಕೋಟಿ ರೂಪಾಯಿಗಳು ಬೇಕಾಗುತ್ತವೆ.

ಶ್ರೀ ಎಸ್. ಬಂಗಾರಪ್ಪ :—ಅಧ್ಯಕ್ಷರೆ, ಕಳೆದ ಜುನಾವಣೆಯಲ್ಲಿ ಈ ರಾಜ್ಯದ ಜನತೆಗೆ ಮಾತು ಕೊಟ್ಟಿರುವ ಪ್ರಕಾರ ಕ್ಯಾಪಿಟೇಷನ್ ಶುಲ್ಕವನ್ನು ಸಂಪೂರ್ಣವಾಗಿ ರದ್ದು ಮಾಡಬೇಕಾಗುತ್ತದೆ. ಇದನ್ನು ರದ್ದು ಮಾಡುವುದು ನಮ್ಮ ದೇಶದ ಒಟ್ಟಾರೆಯ ಅಭಿಪ್ರಾಯವಾಗಿದೆ. ಈ ದಿಸೆಯಲ್ಲಿ 5 ವರ್ಷಗಳ ಕಾಲದವರೆಗೆ ರದ್ದು ಮಾಡುವ ತೀರ್ಮಾನ ಮಾಡಿದ್ದೀವೆನ್ನುವ ಅಭಿಪ್ರಾಯವನ್ನು ಹೇಳುತ್ತಿದ್ದಾರೆ. ಇದು ಜನತೆಯ ಅಭಿಪ್ರಾಯಕ್ಕೆ ವಿರೋಧವಾಗಿರುವುದರಿಂದ ಇದನ್ನು ತಕ್ಷಣ ರದ್ದು ಮಾಡುವ ಕಾನೂನನ್ನು ತರುತ್ತೀರಾ ? ಇದನ್ನು ತರದೇ ಇದ್ದರೆ ನೀವು ಅಲ್ಲಿನ ಮ್ಯಾನೇಜ್‌ಮೆಂಟ್ ನೆನ್ನೊದನೆ ಶಾಮೀಲಾಗಿದ್ದೀರೆಂಬ ಅಭಿಪ್ರಾಯ ಜನತೆಲ್ಲಿ ಬರುತ್ತದೆ. ತಾವು ಈ ಬಗೆ ಶಾಮೀಲಾಗಿದ್ದೀರೆಂಬ ಅಭಿಪ್ರಾಯ ಜನತೆಲ್ಲಿ ಹೋಗುವುದಕ್ಕೆ ತಾವು ತಕ್ಷಣ ಈ ಶುಲ್ಕವನ್ನು ರದ್ದು ಮಾಡುವ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ :— ಶಾಮೀಲಾಗತಕ್ಕದ್ದು ನನಗೆ ಹೊಸಲಿನಿಂದಲೂ ಒಂದಿಲ್ಲ.

ಶ್ರೀ ಎಸ್. ಬಂಗಾರಪ್ಪ : ಸರ್ಕಾರ ಶಾಮೀಲು ಆಗಿದೆ ಎಂದು.

ಶ್ರೀ ಬಿ. ರಾಚಯ್ಯ :—ನಾನು ಸರ್ಕಾರದ ಪರವಾಗಿ ಉತ್ತರ ಕೊಡುತ್ತಿರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ಒಂದು ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರುವವನು ನಾನು. ಯಾವ ಯಾರು ಖಾಸಗೀ ಶಾಲೆಗಳನ್ನು ನಡೆಸಿಕೊಂಡು ದುಡ್ಡು ಸಂಪಾದಿಸಿ ಮಾಡುತ್ತಿದಾರೆ ಅವರೆಲ್ಲಾ ನನಗೂ ಬಹಳ ದೂರ. ಈ ಕ್ಯಾಪಿಟೇಷನ್ ಶುಲ್ಕವನ್ನು ತೆಗೆಯಬೇಕೆಂಬುದನ್ನು ನಾನು ತತ್ಕ್ಷಣ ಒಪ್ಪಿಕೊಂಡಿದೆನೆ. ಮಾನ್ಯ ಸದಸ್ಯರೆಲ್ಲಾ ಇದಕ್ಕೆ ಸಹಕಾರ ನೀಡುವುದಾದರೆ ನಾವು ಇದನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದನ್ನು ತೆಗೆಯುತ್ತೇವೆಂದು ಹೇಳಿದಾಗ ಅದಕ್ಕೆ ಉಚ್ಚ ನ್ಯಾಯಾಲಯದಿಂದ ತಡೆ ಆಜ್ಞೆ ಬಂದಿದೆ. ತಡೆಯಾಜ್ಞೆಯನ್ನು ಹಿಂತೆಗೆದುಕೊಂಡ ಮೇಲೆ ಆಜ್ಞೆಯನ್ನು ಜಾರಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಸಮಗ್ರ ಶಿಕ್ಷಣ ಪೂರ್ವದಲ್ಲೂ ಕೆಲವು ನಿಯಂತ್ರಣಗಳನ್ನು ಇಡುವ ಬಗ್ಗೆ ಸರ್ಕಾರದ ಮುಂದೆ ಬರುತ್ತದೆಂದು ಹೇಳುತ್ತೇನೆ. ಮಾನ್ಯ ಬಂಗಾರಪ್ಪನವರು ನನ್ನ ಬಗ್ಗೆ ಮಾತನಾಡುತ್ತಾ ಏನು ಪಗಲಲ್ಲೇ ಶಾಮೀಲು ಆಗುತ್ತಿದ್ದಾರೆಂದು ಹೇಳಿದ್ದಾರೆ. ಆ ರೀತಿ ನನ್ನ ಬಗ್ಗೆ ಹೇಳಿ ಬಾರದೆಂದು ನಾನು ಹೇಳುತ್ತೇನೆ.

ಉಪಾಧ್ಯಕ್ಷರು:—ಈಗ ಪ್ರಶ್ನೋತ್ತರ ಮುಗಿಯಿತು. ಇನ್ನು ಮುಂದೆ ಲಿಖಿತಮೂಲಕದ ಪ್ರಶ್ನೋತ್ತರಗಳು.

ಶ್ರೀ ಎಂ. ಎಸ್. ಕೃಷ್ಣನ್: - ನನ್ನದೊಂದು ಪ್ರಶ್ನೆ ಇದೆ. ನಾನು ಕೇಳಬೇಕು.

ಉಪಾಧ್ಯಕ್ಷರು: —ದಯವಿಟ್ಟು ಕುಳಿತುಕೊಳ್ಳಿ. ಪ್ರಶ್ನೋತ್ತರದ ವೇಳೆ ಮುಗಿದಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು ಮತ್ತು ಲಿಖಿತ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್: —ಲಿಖಿತ ಮೂಲಕದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಇಡಲಾಗಿದೆ.

ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ 4 ನೇ ದರ್ಜೆ ನೌಕರರ ಬಗ್ಗೆ

20 ಶ್ರೀ ಬಸವರಾಜ ಪಾಟೀಲ್ (ಹುಮನಾಬಾದ್) :—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸಿಪಾಯಿಗಳಿಲ್ಲದ ಪ್ರಾಥಮಿಕ ಶಾಲೆಗಳೆಷ್ಟು.

ಆ) ಆ ಶಾಲೆಗಳನ್ನು ತುಂಬಲು ಸರಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣಮಂತ್ರಿಗಳು): — ಅ) 1883

ಆ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

Sub:–Construction of Primary School Buildings at Humnabad

ಶ್ರೀ ಬಸವರಾಜ ಪಾಟೀಲ್ (ಹುಮನಾ ಬಾದ್) :—ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಹುಮನಾಬಾದ್ ತಾಲ್ಲೂಕಿನಲ್ಲಿ ಇರುವ ಚಿಟ್ಟಗುಪ್ಪ ನಗರದಲ್ಲಿ ಸರ್ಕಾರಿ ಸಂಯುಕ್ತ ಕಿರಿಯ ಕಾಲೇಜು ಇದ್ದು, ಅಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಕಾಲಾ ಕಟ್ಟಡವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;